ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆಸಿ7(8)ಆರ್.ಟಿ.ಇ.ಪ್ರ.ಪ್ರ 20–21/ 2019–20 ದಿನಾಂಕ: 29–07–2020

**ಸುತ್ತೋಲೆ**

ವಿಷಯ: 2020–21 ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಿರುವ ಬಗ್ಗೆ

ಉಲ್ಲೇಖ: ಆರ್.ಟಿ.ಇ ಕಾಯ್ದೆಯಡಿ ಅನ್ ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳ ಹಂಚಿಕೆ ಪ್ರಕ್ರಿಯೆ ದಿನಾಂಕ: 29–07–2020

----

2020–21ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ದಿನಾಂಕ: 29–07–2020ರಂದು ಅನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಸೀಟು ಹಂಚಿಕೆಯಾದ ಪ್ರತೀ ಮಗುವಿನ ಪೋಷಕರ ಮೊಬೈಲ್ ಸಂಖ್ಯೆಗೆ ದಿನಾಂಕ: 29–07–2020 ಹಾಗೂ 30–07–2020 ರಂದು ಪ್ರತಿದಿನ 04 ಬಾರಿ ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಎಸ್.ಎಂ.ಎಸ್ ಕಳುಹಿಸಲಾಗುವುದು.

ಆದ್ದರಿಂದ ಆಯ್ಕೆಯಾದ ಮಗುವಿನ ಪೋಷಕರು ಇಲಾಖಾ ವೆಬ್‌ಸೈಟ್‌ಗೆ ಭೇಟಿ ನೀಡಿ, ಸೀಟು ಆಯ್ಕೆಯಾದ ಅರ್ಜಿಯ ಸಂಖ್ಯೆಯನ್ನು ನಮೂದಿಸಿ, ಸೀಟು ಹಂಚಿಕೆಯಾದ ಪ್ರತಿಯ ಪ್ರಿಂಟ್ ಪಡೆದುಕೊಂಡು, ಈಗಾಗಲೇ ಆರ್.ಟಿ.ಇ ಅರ್ಜಿಯೊಂದಿಗೆ ನೀಡಿದ ಮೂಲ ಆಧಾರ್ ಕಾರ್ಡ್‌ನೊಂದಿಗೆ ಆಯ್ಕೆಯಾದ ಶಾಲೆಗೆ ಸಂಪರ್ಕಿಸಿ ಮಗುವನ್ನು ದಾಖಲೆ ಮಾಡಿಸುವುದು. ದಾಖಲಾತಿ ಮಾಡಲು ದಿನಾಂಕ: 10.08.2020 ಕೊನೆಯ ದಿನವಾಗಿರುತ್ತದೆ.

ಸೀಟು ಹಂಚಿಕೆಯಾಗುವ ಮೊದಲೇ ಪೋಷಕರು ಹಾಗೂ ಮಗುವಿನ ಎಲ್ಲಾ ದಾಖಲೆಗಳನ್ನು ಇಲಾಖೆಯ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಿರುವುದರಿಂದ, ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ದಾಖಲೆಗಳನ್ನು ಮರುಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಪೋಷಕರು ನೀಡುವ ಆಧಾರ್ ಕಾರ್ಡನ್ನು ಪೋಷಕರು ಹಾಗೂ ಮಗುವನ್ನು ಗುರುತಿಸಲು ಮಾತ್ರ ಪರಿಗಣಿಸಲು ಈ ಮೂಲಕ ಸೂಚಿಸಿದೆ. ಈ ವಿಚಾರವನ್ನು ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಗಮನಕ್ಕೆ ತರಲು ಹಾಗೂ ಸೂಕ್ತ ನಿರ್ದೇಶನವನ್ನು ನೀಡಲು ಈ ಮೂಲಕ ಸೂಚಿಸಿದೆ.

ಶಾಲಾ ಆಡಳಿತ ಮಂಡಳಿಯು ಆಯಾ ದಿನ ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು ಕಡ್ಡಾಯವಾಗಿ ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಆನ್‌ಲೈನ್ ಮೂಲಕ ದಾಖಲಾತಿಯನ್ನು ಶಾಲಾ ಲಾಗಿನ್‌ನಲ್ಲಿ ಅದೇ ದಿನ ಅಪ್‌ಲೋಡ್ ಮಾಡುವುದು. ಶಾಲಾ ಹಂತದಲ್ಲಿ ದಾಖಲಾತಿ ಮಾಡಿಕೊಂಡು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡದಿದ್ದಲ್ಲಿ ಆಯಾ ಶಾಲಾ ಆಡಳಿತ ಮಂಡಳಿಯವರೇ ಜವಾಬ್ದಾರರಾಗಿರುತ್ತಾರೆ. ದಾಖಲಾತಿ ಸಂಬಂಧ ಏನಾದರೂ ಅಡಚಣೆಯಾದಲ್ಲಿ ಇಲಾಖಾ ಇಮೇಲ್ ಐ.ಡಿ. rtektk@gmail.com ಗೆ ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ನಿರ್ದೇಶಕರು (ಹೆ.ಪ್ರ)
**ಪ್ರಾಥಮಿಕ ಶಿಕ್ಷಣ**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರ ಮುಖಾಂತರ ಸಂಬಂಧಿಸಿದ ಶಾಲಾ ಮುಖ್ಯಸ್ಥರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸೂಚಿಸಿದೆ.

ಪ್ರತಿಯನ್ನು:

1. ಅಪರ ಆಯುಕ್ತರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಗೌರವಗಳೊಂದಿಗೆ
2. ಅಪರ ಆಯುಕ್ತರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ಗೌರವಗಳೊಂದಿಗೆ
3. ಕಛೇರಿ ಪ್ರತಿ.